# ವೈರಸ್‌ಗೆ ಸೆನ್ಸ್ ಮಾಸ್ಕ್ ಶಾಕ್

■ **ಶಶಿಕುಮಾರ್ ಸಿ.**

**ಕೊ**ರೊನಾ ವೈರಸ್‌ನಿಂದ ರಕ್ಷಣೆ ಪಡೆಯಲು ಜನರು ತರಹೇವಾರಿ ರೀತಿಯ ಮಾಸ್ಕ್‌ಗಳ ಮೊರೆ ಹೋಗುತ್ತಿದ್ದಾರೆ. ಹೀಗಾಗಿಯೇ ಕೊರೊನಾ ಭೀತಿಯಿಂದಾಗಿ ವಿಶ್ವದೆಲ್ಲೆಡೆ ಮಾಸ್ಕ್‌ಗಳ ಮಾರಾಟ ಜೋರಾಗಿದೆ. ಮಾಸ್ಕ್‌ಗಳನ್ನು ಧರಿಸಿದರೂ ವೈರಸ್ ದೇಹದೊಳಗೆ ಸೇರುವ ಸಾಧ್ಯತೆ ಇದೆ. ಇದರ ನಡುವೆ ಬೆಂಗಳೂರಿನ ವಿಜ್ಞಾನಿಗಳು ಸ್ಥಿರ ವಿದ್ಯುತ್‌ನ ಮಾಸ್ಕ್ (ಸೆನ್ಸ್ ಮಾಸ್ಕ್) ಸಂಶೋಧಿಸಿ ಗಮನ ಸೆಳೆದಿದ್ದಾರೆ.

ಸಾಮಾನ್ಯ ಮಾಸ್ಕ್‌ನಂತೆಯೇ ಇರುವ ಈ ಸೆನ್ಸ್ ಮಾಸ್ಕ್‌ನಲ್ಲಿ ಸ್ಥಿರ ವಿದ್ಯುತ್ ಉತ್ಪಾದನೆಯಾಗುತ್ತದೆ. ಅಚ್ಚರಿಯಾದರೂ ಇದು ಸತ್ಯ. ಕೊರೊನಾ ವೈರಸ್ ಸೇರಿದಂತೆ ಬ್ಯಾಕ್ಟೀರಿಯಾಗಳು ಈ ಮಾಸ್ಕ್ ಅನ್ನು ದಾಟಲು ಸಾಧ್ಯವಿಲ್ಲ. ಏಕೆಂದರೆ ವೈರಸ್ ಮತ್ತು ಬ್ಯಾಕ್ಟೀರಿಯಾಗಳು ಮಾಸ್ಕ್‌ಗೆ ಸೋಕಿದೊಡನೆ ಸ್ಥಿರ ವಿದ್ಯುತ್ ತಾಗಿ ಅವು ಸಾಯುತ್ತವೆ.

ಕೇಂದ್ರ ಸರ್ಕಾರದ ನ್ಯಾನೊ ಮತ್ತು ಮೃದು ಪದಾರ್ಥ ವಿಜ್ಞಾನ ಕೇಂದ್ರದ (ಸೆನ್ಸ್) ವಿಜ್ಞಾನಿಗಳು ಈ ವಿಶೇಷವಾದ ಮಾಸ್ಕ್ ಅನ್ನು ಕಂಡುಹಿಡಿದಿದ್ದು, ಶಾಲೆಗಳಲ್ಲಿ ಬಾಚಣಿಗೆ ಹಾಗೂ ಕಾಗದದ ಚೂರುಗಳನ್ನು ಬಳಸಿ ನಡೆಸಲಾಗುವ ಸಾಮಾನ್ಯ ವೈಜ್ಞಾನಿಕ ಪ್ರಯೋಗದ ಮಾದರಿಯನ್ನೇ ಮಾಸ್ಕ್ ತಯಾರಿಸಲು ವಿಜ್ಞಾನಿಗಳು ಬಳಸಿದ್ದಾರೆ.

ಬಾಚಣಿಗೆಯಿಂದ ಒಣಕೂದಲನ್ನು ಉಜ್ಜಿ ಕಾಗದದ ಚೂರುಗಳನ್ನು ಅದರ ಸನಿಹ ಹಿಡಿದಾಗ ಅಯಸ್ಕಾಂತ ಸೆಳೆಯುವಂತೆ ಕಾಗದದ ಚೂರುಗಳನ್ನು ಬಾಚಣಿಗೆ ಸೆಳೆದುಕೊಳ್ಳುತ್ತದೆ. ಅದಕ್ಕೆ ಕಾರಣ ಬಾಚಣಿಗೆಯಿಂದ ಒಣಕೂದಲನ್ನು ಉಜ್ಜಿದಾಗ ಉತ್ಪಾದನೆಗೊಳ್ಳುವ ಸ್ಥಿರ ವಿದ್ಯುತ್. ಯಾವುದೇ ಎರಡು ವಸ್ತುಗಳನ್ನು ಉಜ್ಜಿದಾಗ ಒಂದರಲ್ಲಿದ್ದ ಎಲೆಕ್ಟ್ರಾನ್ ಕಣಗಳು ಪರಸ್ಪರ ಇನ್ನೊಂದಕ್ಕೆ ಜಿಗಿಯುತ್ತವೆ. ಆಗ ಸ್ಥಿರ ವಿದ್ಯುತ್ ಉತ್ಪಾದನೆಯಾಗಿ ಅಯಸ್ಕಾಂತದ ಗುಣ ಪಡೆಯುತ್ತದೆ.



ಇದೇ ಮಾದರಿಯನ್ನು ಬಳಸಿಕೊಂಡು ಈ ಸೆನ್ಸ್ ಮುಖಗವಸು ತಯಾರಿಸಲಾಗಿದೆ. ಯಾವುದೇ ರೀತಿಯ ಬಾಹ್ಯ ವಿದ್ಯುತ್‌ನ ಅವಶ್ಯಕತೆ ಈ ಮಾಸ್ಕ್‌ಗೆ ಇಲ್ಲ. ಬ್ಯಾಗ್‌ಗಳಲ್ಲಿ ಹೆಚ್ಚಾಗಿ ಬಳಸುವ ಎರಡು ಪಾಲಿಪ್ರೊಪಿಲೀನ್ ಹಾಳೆಗಳ ನಡುವೆ ನೈಲಾನ್ ಬಟ್ಟೆಯನ್ನು ಅಳವಡಿಸಿ ಮಾಸ್ಕ್ ತಯಾರಿಸಲಾಗಿದೆ. ಇದನ್ನು ಧರಿಸಿ ಬಳಕೆದಾರರು ಮಾತನಾಡಿದಾಗ ಈ ಪದರಗಳ ನಡುವೆ ಸಣ್ಣ ತಿಕ್ಕಾಟ ಅಥವಾ ಘರ್ಷಣೆ ಉಂಟಾಗುತ್ತದೆ. ಆ ಘರ್ಷಣೆಯಿಂದಲೇ ಸ್ಥಿರ ವಿದ್ಯುತ್ ಉತ್ಪಾದನೆಯಾಗುತ್ತದೆ. ಕೆಲ ಕ್ಷಣಗಳವರೆಗೆ ಅದು ಹಾಗೆಯೇ ಇರುತ್ತದೆ. ಆ ಸಮಯದಲ್ಲಿ ವೈರಸ್ ಮತ್ತು ಬ್ಯಾಕ್ಟೀರಿಯಾಗಳು ಮಾಸ್ಕ್‌ಗೆ ತಾಗಿದರೆ ವಿದ್ಯುತ್ ಸ್ಪರ್ಶದಿಂದ ಸಾಯುತ್ತವೆ ಎಂಬುದು ಸೆನ್ಸ್‌ನ ವಿಜ್ಞಾನಿಗಳ ಮಾತು.

ಸೆನ್ಸ್ ಮಾಸ್ಕ್ ವಿನ್ಯಾಸಕ್ಕೆ ಕೇಂದ್ರ ಸರ್ಕಾರ ಗ್ರೀನ್ ಸಿಗ್ನಲ್ ಕೊಟ್ಟಿದ್ದು, ಮಾಸ್ಕ್‌ಗಳ ತಯಾರಿಕೆ ಕಾರ್ಯವೂ ಪ್ರಗತಿಯಲ್ಲಿದ್ದು, ಶೀಘ್ರವೇ ಮಾರುಕಟ್ಟೆಗೆ ಬರಲಿವೆ. ಬೆಲೆ ಇನ್ನೂ ನಿಗದಿಯಾಗಿಲ್ಲ.

ಸಾಮಾನ್ಯ ಬಳಕೆಗಷ್ಟೇ ಈ ಸೆನ್ಸ್ ಮಾಸ್ಕ್‌ಗಳನ್ನು ಬಳಸಬಹುದಾಗಿದೆ. ಈ ವಿಶೇಷವಾದ ಮಾಸ್ಕ್ ಮತ್ತು ಅದರ ವಿನ್ಯಾಸಕ್ಕೆ ಪೇಟೆಂಟ್ ಅರ್ಜಿಯನ್ನು ಸಲ್ಲಿಸಲಾಗಿದೆ. ಅದು ಲಭ್ಯವಾಗುವ ವಿಶ್ವಾಸವಿದೆ ಎಂದು ಸೆನ್ಸ್‌ನ ನಿರ್ದೇಶಕ ಪ್ರೊ. ಜಿ. ಯು. ಕುಲಕರ್ಣಿ ಹೇಳಿದ್ದಾರೆ.

### ಮಾಸ್ಕ್‌ನ ಇತರ ವಿಶೇಷ

- ಧರಿಸಿದ ಬಳಿಕವೂ ಹೆಚ್ಚು ಸ್ಥಳಾವಕಾಶವಿರಲಿದೆ.
- ಸರಾಗವಾಗಿ ಮಾತನಾಡಬಹುದು. ಧ್ವನಿಯು ಸ್ಪಷ್ಟವಾಗಿ ಇತರರಿಗೆ ಕೇಳಲಿದೆ.
- ಹೆಚ್ಚು ಹೊತ್ತು ಧರಿಸಿದರೂ ಕಿರಿಕಿರಿಯಾಗದು.

### ಸಾಮಾನ್ಯ ಮಾಸ್ಕ್‌ಗಳ ಸಮಸ್ಯೆ

- ಹೆಚ್ಚು ಹೊತ್ತು ಧರಿಸಿದರೆ ಕಿರಿಕಿರಿ ಉಂಟಾಗುತ್ತದೆ.
- ಮಾಸ್ಕ್ ಧರಿಸಿ ಸರಾಗವಾಗಿ ಮಾತನಾಡಲು ಕಷ್ಟ.
- ಉಸಿರಾಟದಿಂದ ಬರುವ ಹಬೆಯು ಕನ್ನಡಕದ ಗಾಜನ್ನು ಆವರಿಸಿ ಕಿರಿಕಿರಿ ಮಾಡುತ್ತದೆ.
- ಮೂಗು ಮತ್ತು ತುಟಿ ಭಾಗದಲ್ಲಿ ತುರಿಕೆಯ ಅನುಭವ.
- ಕಡಿಮೆ ಸ್ಥಳಾವಕಾಶದಿಂದ ಉಸಿರಾಟಕ್ಕೂ ತೊಂದರೆ.

■


ಸರ್ವೇಜನಃ ಸುಖಿನೋ ಭವಂತುಃ

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು



ಶ್ರೀ ಸಾಯಿಬಾಬ ಉಪಾಸಕರು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

9620444460

ಖಾಯಂ ಮನೆ ವಿಳಾಸ:

ಶ್ರೀಬಾಲಾಜಿ ಜ್ಯೋತಿಷ್ಯಂ

ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.